ಮಂಗಲ ಭವನ ಕಟ್ಟಾಕ ಹೊಂಟಿರಲ. ಏನ ಅನ್ನಬೇಕ ನಿಮಗ. ಪಂಚಾಕ್ಷರಿ ನೀ ಏನ ಮಾಡಿದ್ರೂ, ನಿನ್ನ ಬ್ಯಾಳಿ ಬೇಯಂಗಿಲ್ಲ. ಸುಮ್ನ ಶಾಂತ ಇದ್ದ ಊರಿಗೆ ಕೊಳ್ಳಿ ಇಡಬ್ಯಾಡ."

"ಯಾರ ಏನ ಅನ್ನಲಿ, ಮೀಟಿಂಗ್‌ದಾಗ ಠರಾವ ಆಗೇದ, ನಾಳೆಗೆ ಬುಲ್‌ಡೋಜರ್ ತಂದ ತೆಗೆಸಿ ಹಾಕ್ತಿನಿ" ಎಂದು ಪಂಚಾಕ್ಷರಿ ತನ್ನ ಚೇಲಾಗಳಿಗೆ ಏನೋ ಸನ್ನೆ ಮಾಡಿದಾಗ, ಕೂಡಿದ ಜನರಲ್ಲಿ ಏನೋ ಗೊಂದಲ. ಎಲ್ಲಿಂದಲೋ ಬಂದ ಕಲ್ಲುಗಳು ಕಟ್ಟೆಯ ಮೇಲೆ ಬೀಳ ಹತ್ತಿದವು. ಜನರಲ್ಲಿ ಹಾಹಾಕಾರ ಎದ್ದು ಸಿಕ್ಕಸಿಕ್ಕ ಕಡೆ ಓಡಹತ್ತಿದರು. ವಯಸ್ಸಾದವರು ಎಷ್ಟೋ ಜನ ಮೇಲೇಳಲಾಗದೆ ಜನರ ತುಳಿತಕ್ಕೆ ಒಳಗಾದರು. ಅಷ್ಟರಲ್ಲಿಯೇ ಸೊಂಯ್ ಎನ್ನುತ್ತ ಬಂದ ಕಲ್ಲೊಂದು ಪರಪ್ಪಜ್ಜನ ತಲೆಗೆ ಬಿದ್ದಿತ್ತು. ಇಷ್ಟೆಲ್ಲ ಮಾಡಬೇಕೆಂದೆ ತಯಾರಾಗಿ ಬಂದಿದ್ದ ಪಂಚಾಕ್ಷರಿ ಈ ಕಾರ್ಯವನ್ನು ಕೆಲವೇ ಕ್ಷಣಗಳಲ್ಲಿ ಮುಗಿಸಿದ್ದ. ಅಷ್ಟರಲ್ಲಿ ಕೂಡಿದ ಜನರು ಕರಗಿ, ಪಂಚಾಕ್ಷರಿ ಮತ್ತು ಆತನ ಅನುಯಾಯಿಗಳು ಕಾರಿನಲ್ಲಿ ಪಲಾಯನ ಮಾಡಿದ್ದರು. ಕಲ್ಲೇಟಿನಿಂದ ತೀವ್ರ ಗಾಯಗೊಂಡಿದ್ದ ಪರಪ್ಪಜ್ಜನಿಗೆ ಪ್ರಥಮೋಚಾರ ಮಾಡುತ್ತ ಕುಳಿತರು.

"ವಿಶ್ವ, ಈ ಮರ ಉಳಿಸು, ಈ ಕಟ್ಟೆ ಉಳಿಸು" ಎಂಬ ಪರಪ್ಪಜ್ಜನ ಧ್ವನಿ ಕ್ಷೀಣವಾಗಿತ್ತು. ಪರಪ್ಪಜ್ಜನ ಕೈಯ ಹಿಡಿಯುತ್ತ ವಿಶ್ವ, "ಅಜ್ಜ, ಈ ನಿನ್ನ ಮರಕ ಏನೂ ಆಗುದಿಲ್ಲ. ನೀವ್ ಸುಧಾರಿಸಿಕೊಳ್ರಿ" ಎಂದು ತನ್ನ ತಂದೆಯ ಕಡೆ ತಿರುಗಿ,

"ಅಪ್ಪ, ನೀವೆಲ್ಲ ಅಜ್ಜನ ಆರೈಕೆ ಮಾಡ್ರಿ. ನಾನ ಜರೂರ ಕೋರ್ಟಿಗೆ ಹೋಗಿ ಏನಾದರೂ ಪ್ರಯತ್ನ ಮಾಡ್ತಿನಿ. ದಾರ್‍ಯಾಗ ಡಾಕ್ಟರನ್ನೂ ಕಳಿಸ್ತಿನಿ. ಅಜ್ಜನ ತೋರಿಸಿರಿ" ಎಂದು ಶಂಕರನೊಡನೆ ಪಟ್ಟಣಕ್ಕೆ ಹೋದ.

ಆ ದಿನ ಸಾಯಂಕಾಲ ಆಲದ ಕಟ್ಟೆಯ ಮೇಲೆ ಅಂಗಾತ ಮಲಗಿ ಮರವನ್ನೇ ತದೇಕಚಿತ್ತದಿಂದ ನೋಡುತ್ತ ಮಲಗಿದ್ದ ಪರಪ್ಪಜ್ಜನ ಕಣ್ಣಿನಿಂದ ಹನಿಗಳು ಅವರಿಗರಿವಿಲ್ಲದೆ ಬೀಳುತ್ತಿದ್ದವು. ತಾವೇ ಬೆಳೆಸಿದ ಹುಡುಗನ ದೆಸೆಯಿಂದ ಪ್ರಾಣಕ್ಕಿಂತ ಹೆಚ್ಚಾಗಿ ಬೆಳೆಸಿದ ಮರಕ್ಕೆ ಮೃತ್ಯು ಬರುತ್ತಿದೆಯಲ್ಲ ಎಂದು ಪಶ್ಚಾತ್ತಾಪಪಡುತ್ತಿದ್ದರೋ ಅಥವಾ ತನ್ನನ್ನು ರಕ್ಷಿಸಿದ ಮರವನ್ನು ತಾನು ರಕ್ಷಿಸಲಾರದಷ್ಟು ಅಸಹಾಯಕನಾದೆ ಎಂಬ ಸಂಕಟಕ್ಕೊ ಕಣ್ಣಿನ ಅಂಚಿನಿಂದ ಒಂದೊಂದೆ ಹನಿ ಉದುರುತ್ತಿತ್ತು.

ಮಾರನೆ ದಿನ ಪಟ್ಟಣದಿಂದ ಬಂದ ವಿಶ್ವ ಮತ್ತವನ ಸಂಗಡಿಗರು ಕಂಡದ್ದೇನು? ಕಟ್ಟೆಯ ಸುತ್ತಲೂ ನಿಂತಿದ್ದ ಊರಿನ ಸಮಸ್ತ ಜನ. ಕಟ್ಟೆಯ ಮೇಲೆ ಮರದತ್ತ ಮುಖ ಮಾಡಿಕೊಂಡು ಮಲಗಿದ್ದ ಪರಪ್ಪಜ್ಜನ ನಿರ್ಜೀವ ದೇಹ. ಅವರ ಜೀವನದ ಬೇರುಗಳು ಮರದ ಬೇರುಗಳೊಂದಿಗೆ ಲೀನವಾಗಿದ್ದವು. ವಿಶ್ವನ ಕೈಯಲ್ಲಿನ 'ತಡೆಯಾಜ್ಞೆ' ಲಕೋಟೆ ತನ್ನಿಂದ ತಾನೆ ಪರಪ್ಪಜ್ಜನ ನಿಶ್ಚಲ ದೇಹದ ಮೇಲೆ ಬಿದ್ದಿತ್ತು.


**ಮಲ್ಲಿಕಾರ್ಜುನ ಶೆಲ್ಲಿಕೇರಿ**

ಬಾಗಲಕೋಟೆಯಲ್ಲಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಹಿರಿಯ ಅಧಿಕಾರಿ. ಲೇಖನಗಳು ಪ್ರಬಂಧ, ಹನಿಗವನಗಳು ಮತ್ತು ಹಾಸ್ಯ ಬರಹಗಳು ಮಾಸ ಪತ್ರಿಕೆ ಮತ್ತು ವಾರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.